ಮಲೆನಾಡು ಪ್ರದೇಶದಲ್ಲಿ ಸೌದೆಗಾಗಿ ನಿಗದಿಪಡಿಸಿದ ಬೆಲೆ

೨೬೯೦. ಶ್ರೀ ಹೆಚ್. ಜಿ. ಗೋವಿಂದೇಗೌಡ.(ಶೃಂಗೇರಿ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಲೆನಾಡು ಪ್ರದೇಶವಾದ ಶೃಂಗೇರಿ, ಕೊಪ್ಪ, ನರಸಿಂಹರಾಜಪುರ ತಾಲ್ಲೂಕುಗಳಲ್ಲಿ ಉರುಪಲು (ಸೌದೆ) ಬೆಲೆಯು ಕ್ರಮವಾಗಿ ೧೭೯-೦೦, ೧೭೯-೦೦, ೨೪೦-೦೦ರೂಗಳಿರುತ್ತವೆ ;

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರತಿ ಟನ್ನಿಗೆ ಕೇವಲ ೮೦-೦೦ರೂ ಆಗಿದ್ದು ಈ ತಾರತಮ್ಯಕ್ಕೆ ಕಾರಣವೇನು, ಈ ಬೆಲೆಯು ವ್ಯತ್ಯಾಸವು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ಉರುವಲು ಸೌದೆಯಿಂದಲೇ ಜೀವನ ನಡೆಸುತ್ತಿರುವ ಮಲೆನಾಡು ಪ್ರದೇಶಕ್ಕೆ ಒಂದೇ ರೀತಿಯ ಬೆಲೆ (ಕಡಿಮೆ) ಮಾಡಲು ವಿಶೇಷವಾಗಿ ಅತಿ ಹೆಚ್ಚು ಬೆಲೆಯಿರುವ ನರಸಿಂಹರಾಜಪುರ ತಾಲ್ಲೂಕಿಗೆ ಈಗಿರುವ ರೂ.೨೪೦-೦೦ಕ್ಕಿಂತಲೂ ಕಡಿಮೆ ಮಾಡಲು ಸರ್ಕಾರವು ಏನು ಕ್ರಮ ಕೈಗೊಳ್ಳುವುದು ?

ಶ್ರೀ ಜಿ. ಎಸ್. ಬಾಗಲಕೋಟ್(ಅರಣ್ಯ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ಡಿಪೋಗಳಲ್ಲಿ ಸೌದೆಯ ಮಾರಾಟ ಬೆಲೆಯಿಂದು ಟನ್ನಿಗೆ ರೂ. ೧೭೦-೦೦ ಇದೆ. ಈ ಜಿಲ್ಲೆಯಲ್ಲಿ ಬಹುಪಾಲು (ಶೇಕಡ ೬೦ ರಷ್ಟು) ಅರಣ್ಯವಿದ್ದು ಜನರ ನಿವಾಸವು ಕಾಡಿಗೆ ಸಮೀಪವಾಗಿದ್ದು, ಸೌದೆಯ ತಯಾರಿಕೆ ಮತ್ತು ಸಾಗಾಣಿಗೆಕೆ ಹೆಚ್ಚು ಕಡಿಮೆ ಆಗುವುದರಿಂದ, ಇಲ್ಲಿನ ಜನರಿಗೆ ಕಡಿಮೆ ದರದಲ್ಲಿ ಸೌದೆಯನ್ನು ಸರಬರಾಜು ಮಾಡಲಾಗುತ್ತಿದೆ. ಆದರೆ ಉಳಿದ ಪ್ರದೇಶಗಳಲ್ಲಿ ಇಷ್ಟು ಹೆಚ್ಚಿನ ಪ್ರಮಾಣದ ಅರಣ್ಯವಿಲ್ಲದಿರುವುದರಿಂದ ಸೌದೆಯ ಸಾಗಾಣಿಕೆಗೆ ಹೆಚ್ಚು ಖರ್ಚು ತಗಲುವುದರಿಂದ ಸೌದೆಯ ಮಾರಾಟ ಬೆಲೆಯಲ್ಲಿ ಉತ್ತರ ಕನ್ನಡ ಜಿಲ್ಲೆಗಿಂತ ಏರಿಕೆಯಿದೆ.

ಇ) ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಚ್. ಜಿ. ಗೋವಿಂದೇಗೌಡ —ಮಾನ್ಯ ಅಧ್ಯಕ್ಷರೆ, ಕೊಪ್ಪ, ನರಸಿಂಹರಾಜಪುರ ಮತ್ತು ಶೃಂಗೇರಿ ಈ ಮೂರು ತಾಲ್ಲೂಕುಗಳು ಮಲೆನಾಡು ಪ್ರದೇಶದಲ್ಲಿದೆ. ಕೊಪ್ಪ ಮತ್ತು ಶೃಂಗೇರಿಯಲ್ಲಿ ಸೌದೆ ಬೆಲೆ ೧೭೯ ರೂಪಾಯಿ ಒಂದು ಟನ್ನಿಗೆ ಇದ್ದರೆ ನರಸಿಂಹರಾಜಪುರದಲ್ಲಿ ೨೪೦ ರೂಪಾಯಿ ಇದೆ. ಈ ತಾರತಮ್ಯ ಮಾಡಿರುವುದು ಸರಿಯಾಗಿ ಕಾಣುವುದಿಲ್ಲ. ಆದೂ ಮಲೆನಾಡು ಪ್ರದೇಶವಾಗಿರುವುದರಿಂದ ಮೂರು ಪ್ರದೇಶಗಳಲ್ಲೂ ೧೭೯ ರೂಪಾಯಿಗಳಂತೆ ದರ ನಿಗದಿ ಮಾಡಿದರೆ ಆ ಪ್ರದೇಶದ ಜನರಿಗೆ ವ್ಯತ್ಯಾಸವಾಗದ ರೀತಿಯಲ್ಲಿ ಸೌದೆ ಸರಬರಾಜು ಮಾಡುವುದಕ್ಕೆ ಅನುಕೂಲವಾಗುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರತಿ ಟನ್ನಿಗೆ ಕೇವಲ ೮೦ ರೂಪಾಯಿ ಇದ್ದು ಈ ತಾರತಮ್ಯಕ್ಕೆ ಕಾರಣವೇನು ಎಂಬ ಪ್ರಶ್ನೆಗೆ ಉತ್ತರದಲ್ಲಿ ಅಲ್ಲಿ ಕಾಡು ಜಾಸ್ತಿ ಇದೆ ಎಂದು ಹೇಳಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ವಿನಂ ಕಾಡಿದೆ) ಆದೇರೀತಿ ಕೊಪ್ಪ, ನರಸಿಂಹರಾಜಪುರ ಮತ್ತು ಶೃಂಗೇರಿಯಲ್ಲೂ ಕಾಡಿದೆ. ಅರಣ್ಯ ಇಲಾಖೆಗೆ ಇದು ಗೊತ್ತಿದೆ. ಉತ್ತರ ಕನ್ನಡ ಜಿಲ್ಲೆಯಿಂದ ಎಷ್ಟು ಉತ್ಪತ್ತಿ ಬರುತ್ತಿದೆಯೋ ಅಷ್ಟೇ ಉತ್ಪತ್ತಿ ಕೊಪ್ಪ ವಿಭಾಗದಿಂದಲೂ ಬರುತ್ತಿದೆ ಎಂಬುದು ಅರಣ್ಯ ಇಲಾಖೆಗೆ ಗೊತ್ತಿದೆ. ನರಸಿಂಹರಾಜಪುರದಲ್ಲಿರತಕ್ಕ ೨೪೦ ರೂಪಾಯಿಯನ್ನು ತಗ್ಗಿಸಿ ಕೊಪ್ಪ ಮತ್ತು ಶೃಂಗೇರಿಯಲ್ಲಿರುವಂತೆ ೧೭೯ ರೂಪಾಯಿಗಳಿಗಾದರೂ ಸರಿಪಡಿಸುತ್ತೀರಾ ಎಂದು ಈ ಸಂದರ್ಭದಲ್ಲಿ ಕೇಳುತ್ತೇನೆ.

ಶ್ರೀ ಜಿ. ಎಸ್. ಬಾಗಲಕೋಟ್.—ಮಾನ್ಯ ಹಿರಿಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದೆ. ಆದರ ಬಗ್ಗೆ ಆದಷ್ಟು ತೀವ್ರವಾಗಿ ಅವಶ್ಯಕ ಕ್ರಮ ಕೈಗೊಳ್ಳಲಾಗುವುದು.